# ‘ಅಂಚೆ’ಯಣ್ಣನ ಡಾಕ್‌ಪೇ

■ ಶಶಿಕುಮಾರ್ ಸಿ.




‘ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಇದು ಸಕಾಲ ಮತ್ತು ಇದರನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಡಿಜಿಟಲ್ ಪೇಮೆಂಟ್ಸ್ ನಿಮ್ಮ ಸಹಾಯಕ್ಕೆ ಬರುತ್ತದೆ.

-ನರೇಂದ್ರ ಮೋದಿ,
ಪ್ರಧಾನ ಮಂತ್ರಿ

ದೇಶದಲ್ಲಿ ಡಿಜಿಟಲೀಕರಣಕ್ಕೆ ಕೇಂದ್ರ ಸರ್ಕಾರ ಉತ್ತೇಜನ ನೀಡಿದ ನಂತರ ಜನರೂ ಸಹ ಈ ಕ್ಷೇತ್ರದತ್ತ ತುಸು ಹೆಚ್ಚಾಗಿಯೇ ಒಲವು ವ್ಯಕ್ತಪಡಿಸುತ್ತಿದ್ದಾರೆ. ಡಿಜಿಟಲೀಕರಣವು ಜನರನ್ನು ಬಹುಬೇಗ ತಲುಪಬಲ್ಲ ಕ್ಷೇತ್ರ. ಹೀಗಾಗಿಯೇ ಡಿಜಿಟಲೀಕರಣದ ಎಳೆಯನ್ನು ಹಿಡಿದಿರುವ ಕೆಲವು ಕಾರ್ಪೊರೇಟ್ ಕಂಪನಿಗಳು ವಿವಿಧ ರೀತಿಯ ಆ್ಯಪ್ ಆಧಾರಿತ ಪೇಮೆಂಟ್ ವ್ಯವಸ್ಥೆಯನ್ನು ಜಾರಿಗೆ ತಂದಿವೆ.

ಈ ನಡುವೆ ನಾವೇನು ಖಾಸಗಿ ಕ್ಷೇತ್ರಕ್ಕಿಂತ ಕಡಿಮೆಯೇ ಎಂಬಂತೆ ಒಂದು ಹೆಜ್ಜೆ ಮುಂದಿಟ್ಟಿರುವ ಅಂಚೆ ಇಲಾಖೆಯು ತನ್ನ ಸಹಭಾಗಿತ್ವ ಸಂಸ್ಥೆಯಾದ ‘ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್’ (ಐಪಿಪಿಬಿ) ಮೂಲಕ, ಆ್ಯಪ್ ಆಧಾರಿತ ಪೇಮೆಂಟ್ ಸೇವೆಯನ್ನು ಒದಗಿಸುವ ‘ಡಾಕ್ ಪೇ’ ಆ್ಯಪ್ ಅನ್ನು ಈಚೆಗೆ ಬಿಡುಗಡೆಗೊಳಿಸಿವೆ.

ಭಾರತದಾದ್ಯಂತ ಡಿಜಿಟಲ್ ಹಣಕಾಸು ವ್ಯವಸ್ಥೆಯನ್ನು ಇನ್ನಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಈ ಆ್ಯಪ್ ಬಿಡುಗಡೆ ಮಾಡಲಾಗಿದೆ. ಅಂಚೆ ಇಲಾಖೆಯು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದು, ವಿಶ್ವಾಸಾರ್ಹವೂ ಆಗಿದೆ. ಇದರಿಂದಾಗಿಯೇ ಜನರು ಈ ಆ್ಯಪ್ ಮೇಲೆ ವಿಶ್ವಾಸವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಬಳಸುತ್ತಾರೆ ಎಂಬ ನಂಬಿಕೆ ಇಟ್ಟುಕೊಂಡು ಈ ಸೇವೆಯನ್ನು ಹೊರತರಲಾಗಿದೆ.

ಇದು ಇತರೆ ಡಿಜಿಟಲ್ ಪೇಮೆಂಟ್ಸ್ ಆ್ಯಪ್‌ಗಳಾದ ಫೋನ್‌ಪೇ, ಗೂಗಲ್ ಪೇ, ಪೇಟಿಎಂ, ಅಮೆಜಾನ್ ಪೇ, ವಾಟ್ಸ್‌ಆ್ಯಪ್ ಅಂತೆಯೇ ಕಾರ್ಯ ನಿರ್ವಹಿಸಲಿದ್ದು, ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್‌ನ (ಐಪಿಪಿಬಿ) ಸದಸ್ಯರಷ್ಟೇ ಅಲ್ಲದೇ ಬ್ಯಾಂಕ್ ಖಾತೆ ಹೊಂದಿರುವ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಇದರ ಸೇವೆಯನ್ನು ಪಡೆಯಬಹುದು.

ಹಣ ವರ್ಗಾವಣೆ, ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಣ ಪಾವತಿ, ಖರೀದಿ ಹಾಗೂ ಸೇವೆಗಳಲ್ಲಿ ವರ್ಚುವಲ್ ಡೆಬಿಟ್ ಕಾರ್ಡ್ ಮತ್ತು ಯುಪಿಐ ಬಳಸಿ ಪಾವತಿಸುವುದು, ಯಾವುದೇ ಬ್ಯಾಂಕ್ ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆ ಹಾಗೂ ಬಿಲ್ ಪಾವತಿ ಸೇವೆಗಳು ಈ ಆ್ಯಪ್ ಮೂಲಕ ಸಿಗಲಿದೆ. ಜೊತೆಗೆ ಆ್ಯಪ್‌ಗೆ ಲಾಗಿನ್ ಆಗಲು ಪಾಸ್‌ವರ್ಡ್ ಜೊತೆಗೆ ಫಿಂಗರ್ ಪ್ರಿಂಟ್ ಎನೇಬಲ್ ಆಯ್ಕೆಯನ್ನೂ ನೀಡಲಾಗಿದೆ. ದೂರು ದಾಖಲಿಸಲು ಸುಲಭ ವಿಧಾನ, ದಾಖಲಿಸಿದ ದೂರುಗಳ ಸ್ಟೇಟಸ್ ತಿಳಿಯಲು ಪ್ರತ್ಯೇಕ ಆಯ್ಕೆಯನ್ನು ನೀಡಲಾಗಿದೆ. ಆಧಾರ್ ಸಂಖ್ಯೆಯನ್ನು ಕೇಂದ್ರವಾಗಿರಿಸಿಕೊಂಡು ಪಾವತಿ ಸೇವೆಗಳನ್ನು ಇದು ಒದಗಿಸುತ್ತಿದೆ.

ಇತರೆ ಡಿಜಿಟಲ್ ಪೇಮೆಂಟ್ಸ್ ಆ್ಯಪ್‌ಗಳಲ್ಲಿರುವಂತೆ ಸುಮಾರು 470ಕ್ಕೂ ಅಧಿಕ ವಿವಿಧ ಬಿಲ್ ಪಾವತಿಗಳ ಸೇವೆ ಇದರಲ್ಲಿದೆ. ಅಂಚೆ ಇಲಾಖೆಗೆ ಸಂಬಂಧಪಟ್ಟಂತೆ ಕೆಲವೊಂದು ವಿಶೇಷ ಸೇವೆಗಳನ್ನು ಸೇರಿಸಲಾಗಿದೆ. ಅಂಚೆ ಇಲಾಖೆಯ ಆರ್‌ಡಿ, ಪಿಪಿಎಫ್, ಸುಕನ್ಯಾ ಸಮೃದ್ಧಿ ಖಾತೆ ಸೇರಿದಂತೆ ಅಂಚೆ ಇಲಾಖೆ ಇತರ ಯೋಜನೆಗಳಿಗೆ ಹಣವನ್ನು ಈ ಆ್ಯಪ್‌ನಿಂದಲೇ ಪಾವತಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

ಒಂದಕ್ಕಿಂತ ಅಧಿಕ ಬ್ಯಾಂಕ್ ಖಾತೆಗಳನ್ನು ಲಿಂಕ್ ಮಾಡುವ ಹಾಗೂ ಅವುಗಳ ಮೂಲಕ ಹಣ ವರ್ಗಾವಣೆ ಪ್ರಕ್ರಿಯೆ ಮಾಡುವ ಸೇವೆಯನ್ನೂ ಇದರಲ್ಲಿ ಒದಗಿಸಲಾಗಿದೆ. ಪ್ರಸ್ತುತ ಆ್ಯಂಡ್ರಾಯ್ಡ್ ವೇದಿಕೆಯಲ್ಲಿ ಮಾತ್ರ ಈ ಅಪ್ಲಿಕೇಷನ್ ಲಭ್ಯವಿದ್ದು, ಐಒಎಸ್ ಪ್ಲಾಟ್‌ಫಾರ್ಮ್‌ನಲ್ಲಿ ಶೀಘ್ರದಲ್ಲೇ ಲಭ್ಯವಾಗಲಿದೆ ಎಂದು ಅಂಚೆ ಇಲಾಖೆ ಟ್ವಿಟ್ಟರ್ ಮೂಲಕ ಮಾಹಿತಿ ಹಂಚಿಕೊಂಡಿದೆ.

‘ಡಾಕ್‌ಪೇ’ಯನ್ನು ಬಿಡುಗಡೆ ಮಾಡಿ ಮಾತನಾಡಿದ ಕೇಂದ್ರ ದೂರಸಂಪರ್ಕ ಮತ್ತು ಐಟಿ ಸಚಿವ ರವಿ ಶಂಕರ್ ಪ್ರಸಾದ್, ‘ರಾಷ್ಟ್ರವ್ಯಾಪಿ ಲಾಕ್‌ಡೌನ್ ಅವಧಿಯಲ್ಲಿ ಭಾರತೀಯ ಅಂಚೆ ಡಿಜಿಟಲ್ ಹಾಗೂ ಭೌತಿಕ ವಿಧಾನದಲ್ಲಿ ಹಲವು ರೀತಿಯ ಪೋಸ್ಟಲ್ ಸೇವೆಗಳನ್ನು ನೀಡಿತು. ಈ ಅತ್ಯಾಧುನಿಕ ಸೇವೆಯು ಆನ್‌ಲೈನ್‌ನಲ್ಲಿ ಬ್ಯಾಂಕಿಂಗ್ ಸೇವೆಗಳು ಮತ್ತು ಅಂಚೆ ಸೇವೆಗಳನ್ನು ನೀಡುವ ಜೊತೆಗೆ ಅಂಚೆ ಹಣಕಾಸು ಸೇವೆಗಳನ್ನು ಮನೆಬಾಗಿಲಿನಲ್ಲಿ ಪಡೆಯಬಹುದಾಗಿದೆ’ ಎಂದಿದ್ದಾರೆ. ■

